ಎರಡನೆಯದಾಗಿ, ಶೇರುಗಳನ್ನು ಖಾಸಗಿಯವರಿಗೆ ಭಾಗಶಃ ಕೊಡುವಂತಹ option ಒಂದನ್ನೂ ಸಹಿತ ನಾವು ಇಟ್ಟುಕೊಂಡಿದ್ದೇವೆ. ಪ್ರತಿ ವರ್ಷವೂ ಕೂಡ taxation ವಿಚಾರದಲ್ಲಿ ಕೆಲವೊಂದು ರಿಯಾಯಿತಿಗಳನ್ನು ಆರ್ಥಿಕ ಇಲಾಖೆಯವರು ಕಾರ್ಖಾನೆಗೆ ಕೊಡುತ್ತಿದ್ದಾರೆ. ಅದನ್ನೂ ಕಂಟಿನ್ಯೂ ಮಾಡಿಕೊಂಡು ಹೋಗಬೇಕು ಎನ್ನತಕ್ಕಂಥದ್ದೂ ಸಹ ಇದೆ. ಇದೆಲ್ಲವೂ ಸಹಿತ overcome ಮಾಡುವುದಕ್ಕಿಂತ ಹೆಚ್ಚಾಗಿ, ಬಹಳ ಮುಖ್ಯವಾಗಿ, ಇದನ್ನು ಸರ್ಕಾರಿ ಸ್ವಾಮ್ಯದಲ್ಲಿ ಉಳಿಸಿಕೊಳ್ಳಬೇಕೋ? ಅಥವಾ ಖಾಸಗೀಕರಣದ ಜೊತೆಯಲ್ಲಿ, ಮೈಸೂರಿನಲ್ಲಿ ಇರತಕ್ಕಂಥ ವಿಕ್ರಾಂತ್ ಟೈರ್ ಫ್ಯಾಕ್ಟರಿಯನ್ನು ಯಾವ ರೀತಿಯಾಗಿ ಬದುಕಿಸಿದೆವೋ, ಆ ರೀತಿ ಬದುಕಿಸಲಿಕ್ಕೆ ಸಾಧ್ಯವೇ ಎನ್ನುವುದರ ಬಗ್ಗೆ ವಿಚಾರ ಮಾಡುತ್ತಿದ್ದೇವೆ. ಸಚಿವ ಸಂಪುಟದ ಉಪ ಸಮಿತಿಯೊಂದು ಇದಕ್ಕೋಸ್ಕರ ರಚನೆಯಾಗಿದೆ. ಸಚಿವ ಸಂಪುಟದ ಉಪ ಸಮಿತಿಯ ಪರಿಶೀಲನೆಯಲ್ಲಿ ಇದು ಇದೆ. ಇದಕ್ಕೆ ಎಷ್ಟು ಸಮಯ ಬೇಕಾಗುತ್ತದೆ ಎಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಬಹುಶಃ ಇನ್ನು 3–4 ತಿಂಗಳೊಳಗಡೆ, ಒಂದು ನಿರ್ದಿಷ್ಟವಾದ ಕಾರ್ಯಕ್ರಮವನ್ನು, MPM ಅನ್ನು ಪುನಶ್ಚೇತನಗೊಳಿಸಲಿಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ. ಸದರಿ ಕಾರ್ಖಾನೆಯನ್ನು ನಾವು ಡಿವೈಡ್ ಮಾಡಿ, ಪೇಪರ್ ಮಿಲ್ಸ್ ಒಂದನ್ನು ಮಾಡಿ, ಶುಗರ್ ಫ್ಯಾಕ್ಟರಿ ಒಂದನ್ನು ಮಾಡಿ, co-generation ಒಂದನ್ನು ಮಾಡಿ, ಈ ರೀತಿಯಾಗಿ ಬೇರೆ ಬೇರೆಯಾಗಿ ಡಿವೈಡ್ ಮಾಡಿ, ಇದನ್ನು ಮಾಡಲಿಕ್ಕೆ ಸಾಧ್ಯವೇ ಎನ್ನುವುದನ್ನೂ ಸಹಿತ ನಾವು ವಿಚಾರ ಮಾಡುತ್ತಿದ್ದೇವೆ. ಇನ್ನು ಮೂರು ತಿಂಗಳೊಳಗಡೆ ಈ ಬಗ್ಗೆ ನಾವು ಒಂದು ನಿರ್ಧಾರಕ್ಕೆ ಬರುವವರಿದ್ದೇವೆ.

<u>ಮೈಸೂರು ಬಿತ್ತನೆ ಪ್ರದೇಶದ ರೇಷ್ಮೆ ಅಭಿವೃದ್ಧಿ :</u>

254 (3111) ಶ್ರೀ ನಿಂಗಪ್ಪ ಹೆಚ್. (ಕುಣಿಗಲ್) :– ಮಾನ್ಯ ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಬಿತ್ತನೆ ತಳಿ ರೇಷ್ಮೆ ಅಭಿವೃದ್ಧಿ ಮತ್ತು ಗೂಡಿನ ಗುಣಮಟ್ಟ ಸುಧಾರಣೆ ಬಗ್ಗೆ ಸರ್ಕಾರ ಹಮ್ಮಿಕೊಂಡಿರುವ ಕಾರ್ಯಕ್ರಮಗಳೇನು;

ಆ) ಈ ಬಗ್ಗೆ ವಿಶೇಷ ಪ್ಯಾಕೇಜ್ ಕಾರ್ಯಕ್ರಮ ಅಳವಡಿಸಿಕೊಂಡು ಬಿತ್ತನೆ ಪ್ರದೇಶದ ಅಭಿವೃದ್ಧಿಗೆ ಸರ್ಕಾರ ಮುಂದಾಗುವುದೇ;

ಇ) ಬಿತ್ತನೆ ಪ್ರದೇಶದ ಮಾರುಕಟ್ಟೆಗಳಲ್ಲಿ ದಳ್ಳಾಳಿಗಳ ಹಾವಳಿ ತಡೆಗಟ್ಟಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಸಿ. ಚನ್ನಿಗಪ್ಪ (ರೇಷ್ಮೆ ಸಚಿವರು) :

ಅ.

1. ಮೈಸೂರು ಶುದ್ಧತಳಿಯ ಸಾಕಾಣಿಕೆಗೆ ಪ್ರತ್ಯೇಕ ಬಿತ್ತನೆ ಪ್ರದೇಶವನ್ನು ಅಧಿಸೂಚಿಸಲಾಗಿದೆ.

2. ಈ ತಳಿಯ ಅಭಿವೃದ್ಧಿ ಮತ್ತು ವೈಜ್ಞಾನಿಕ ವೃದ್ಧಿಸುವಿಗಾಗಿ 9 ರೇಷ್ಮೆ ಕೃಷಿ ಕ್ಷೇತ್ರಗಳು 22 ಬಿತ್ತನೆ ಕೋಠಿಗಳು, 15 ತಾಂತ್ರಿಕ ಸೇವಾ ಕೇಂದ್ರಗಳು ಮತ್ತು 10 ರೇಷ್ಮೆ ಬಿತ್ತನೆ ಗೂಡಿನ ಮಾರುಕಟ್ಟೆಗಳನ್ನು ಸ್ಥಾಪಿಸಿ, ಇವುಗಳಿಗೆ ಸುಸಜ್ಜಿತ ಕಟ್ಟಡಗಳನ್ನು ನಿರ್ಮಿಸಲಾಗಿದೆ.

3. ಈ ಸಂಸ್ಥೆಗಳ ಉಸ್ತುವಾರಿಗೆ 6 ರೇಷ್ಮೆ ಸಹಾಯಕ ನಿರ್ದೇಶಕರು, 2 ರೇಷ್ಮೆ ಉಪ ನಿರ್ದೇಶಕರು ಮತ್ತು 1 ರೇಷ್ಮೆ ಜಂಟಿ ನಿರ್ದೇಶಕರ ಕಛೇರಿಗಳನ್ನು ಸ್ಥಾಪಿಸಲಾಗಿದೆ.

4. ರೋಗ ನಿಯಂತ್ರಣಕ್ಕಾಗಿ ಈ ಬಿತ್ತನೆ ಪ್ರದೇಶದ ಎಲ್ಲಾ ಹುಳುಸಾಕಾಣೆ ಮನೆಗಳಿಗೆ ಸೋಂಕು ನಿವಾರಣೆಯನ್ನು ಉಚಿತವಾಗಿ ಮಾಡಲಾಗುತ್ತಿದೆ.

5. ಕ್ರಮಬದ್ಧ ಬೆಳೆವೀಕ್ಷಣೆ, ರೋಗ ಮುಕ್ತತೆಯ ದೃಢೀಕರಣ ಮತ್ತು ಉತ್ತಮ ಬೆಳೆ ಪಡೆಯಲು ಹೊಸ ತಾಂತ್ರಿಕತೆಗಳ ಅನುಸರಣೆ ಬಗ್ಗೆ ಮಾರ್ಗದರ್ಶನ ನೀಡಲಾಗುತ್ತಿದೆ.

6. ಕ್ಷೇತ್ರೋತ್ಸವಗಳು, ಕಾರ್ಯಾಗಾರಗಳು ಮತ್ತು ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಗುಣಮಟ್ಟದ ಸುಧಾರಣೆ ಬಗ್ಗೆ ತಿಳುವಳಿಕೆ ನೀಡಲಾಗುತ್ತದೆ.

7. ಬಿತ್ತನೆಗೆ ಯೋಗ್ಯವಾಗಿದ್ದು ಬೇಡಿಕೆ ಇಲ್ಲದ ಕಾರಣ ನೂಲು ಬಿಚ್ಚಾಣಿಕೆಗೆ ಮಾರಾಟವಾಗುವ ಪ್ರತಿ ಕೆ.ಜಿ. ಬಿತ್ತನೆ ಗೂಡಿಗೆ ರೂ.40/–ರಂತೆ ಬೋನಸ್ ನೀಡಲಾಗುತ್ತಿದೆ.

8. ಸುಧಾರಿತ ಹಿಪ್ಪುನೇರಳೆ ತಳಿಯ ನಾಟಿಗೆ, ಸಾವಯವ ಕೃಷಿ ಪದ್ಧತಿಗೆ, ಪ್ರತ್ಯೇಕ ಹುಳು ಸಾಕಾಣೆ ಮನೆ ನಿರ್ಮಾಣಕ್ಕೆ, ನೀರಿನ ಸಂರಕ್ಷಣೆಗೆ ಹನಿ ನೀರಾವರಿ ಪದ್ಧತಿ ಅಳವಡಿಕೆಗೆ ಮತ್ತು ಸಲಕರಣೆಗಳ ಖರೀದಿಗೆ ಸಹಾಯಧನ ಸೌಲಭ್ಯ ಒದಗಿಸಲಾಗುತ್ತಿದೆ.

9. ಬಿತ್ತನೆ ಪ್ರದೇಶದ ಉಸ್ತುವಾರಿಯನ್ನು ಇನ್ನೂ ಹೆಚ್ಚು ಪರಿಣಾಮಕಾರಿ ಮಾಡಲು ಮಿಶ್ರತಳಿ ಪ್ರದೇಶಕ್ಕೆ ಹೊಂದಿಕೊಳ್ಳುವ ಕೆಲವು ಪ್ರದೇಶವನ್ನು ಬಿತ್ತನೇತರ ಪ್ರದೇಶವನ್ನಾಗಿ ಪರಿವರ್ತಿಸಲು ಕ್ರಮ ತೆಗೆದುಕೊಳ್ಳಲಾಗಿದೆ.

ಆ) ಮೈಸೂರು ಬಿತ್ತನೆ ಪ್ರದೇಶದ ರೇಷ್ಮೆ ಅಭಿವೃದ್ಧಿಗೆ ಸರ್ಕಾರವು ಈಗಾಗಲೇ ವಿಶೇಷ ಪ್ಯಾಕೇಜನ್ನು ಒದಗಿಸಿದೆ.

ಇ) 1. ಮಾರುಕಟ್ಟೆಗಳಲ್ಲಿ ರಹದಾರಿ ಪಡೆದಿರುವ ವ್ಯಕ್ತಿಗಳಿಗೆ ಮಾತ್ರ ಪ್ರವೇಶಿಸಲು ಅವಕಾಶ ಕಲ್ಪಿಸಿದೆ.

2. ಬಿತ್ತನೆಗೆ ಮಾರಾಟವಾಗಿ ಉಳಿಯುವ ಬಿತ್ತನೆ ಗೂಡುಗಳನ್ನು ಹಬೆ ನೀಡಿದ ನಂತರ ರೀಲರುಗಳು ಪಡೆಯುವಂತೆ ವ್ಯವಸ್ಥೆ ಮಾಡಲಾಗಿದೆ.

ಶ್ರೀ ಹೆಚ್. ನಿಂಗಪ್ಪ : – ಮಾನ್ಯ ಅಧ್ಯಕ್ಷರೇ, ಕುಣಿಗಲ್, ಮಾಗಡಿ ಮತ್ತು ತುಮಕೂರು ತಾಲ್ಲೂಕಿನ ಹೆಬ್ಬೂರು, ಈ ಪ್ರದೇಶ ಬಿತ್ತನೆ ವಲಯ. ಈ ಬಿತ್ತನೆ ವಲಯದಲ್ಲಿ ನಾವು ಈ ಬೀಜಗಳನ್ನು ಅಂದರೆ, ಚಿಟ್ಟೆ ತಯಾರು ಮಾಡಿ, ಉತ್ತಮ ತಳಿಯ ಬೀಜಗಳನ್ನು ನಾವು ಬೇರೆ ಬೇರೆ ಪ್ರದೇಶಕ್ಕೆ ಅಂದರೆ ರೇಷ್ಮೆ ಗೂಡನ್ನು ಬೆಳೆಯುವುದಕ್ಕೆ, ಸಪ್ಲೈ ಮಾಡುವುದಕ್ಕೆ, ಅದಕ್ಕೆ ಒಂದು ವಲಯವನ್ನು, ಒಂದು ವ್ಯಾಪ್ತಿಯನ್ನು ನಿಗದಿ ಮಾಡಿದ್ದಾರೆ. ಈ ವ್ಯಾಪ್ತಿಯಲ್ಲಿ ಬರತಕ್ಕಂಥ ರೈತರಿಗೆ ಎಷ್ಟು ಕಷ್ಟವಾಗಿದೆ ಎಂದರೆ, ಇಲ್ಲಿ ನಮ್ಮದು ನಾಟಿಗೂಡು ಎಂಬುದು ಸ್ಥಳೀಯವಾದಂತಹ ತಳಿಯಾಗಿದೆ. ವಿದೇಶಿ ಗಂಡು ಮತ್ತು ಸ್ಥಳೀಯವಾದಂತಹ ಹೆಣ್ಣನ್ನು ಕ್ರಾಸ್ ಮಾಡಿ, ಉತ್ತಮವಾದಂತಹ ಒಂದು ಗೂಡನ್ನು ಬೆಳೆದು ಅದನ್ನು ಬೇರೆ ಬೇರೆ ಪ್ರದೇಶಕ್ಕೆ ಈ ಮೊಟ್ಟೆಗೋಸ್ಕರ ನಾವು ಕಳುಹಿಸಿಕೊಡುತ್ತಿದ್ದೇವೆ. ಆದರೆ ಈ ಪ್ರದೇಶದ ರೈತರಿಗೆ ಬಹಳಷ್ಟು ತೊಂದರೆ ಇದೆ. ಇವತ್ತು ರೇಷ್ಮೆ ಗೂಡನ್ನು ಬೆಳೆಯಬೇಕಾದಂತಹ ರೈತನಿಗೆ ವಿಶೇಷವಾದಂತಹ ಸವಲತ್ತುಗಳನ್ನು ಕೊಟ್ಟರೆ, ನಾವು ಬೇರೆ ಬೇರೆ ಪ್ರದೇಶದಲ್ಲಿ ಈ ರೇಷ್ಮೆಯನ್ನು ಬೆಳೆಯುವುದಕ್ಕೆ, ಈ ಮೊಟ್ಟೆ ಗೂಡನ್ನು ಕಳುಹಿಸಿಕೊಡುವುದಕ್ಕೆ ಸಹಾಯಕವಾಗುತ್ತದೆ. ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ, ಬಿತ್ತನೆಗೆ ಯೋಗ್ಯವಾಗಿರತಕ್ಕಂಥ ಗೂಡನ್ನು ಬೆಳೆದರೂ ಕೂಡ, ಎಲ್ಲಾ ಗೂಡನ್ನು ನಾವು ಬಿತ್ತನೆಗೆ ತಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಬಿತ್ತನೆಗೆ ತೆಗೆದುಕೊಳ್ಳುವುದಕ್ಕೆ ಆಗದೇ ಇರತಕ್ಕಂಥ ಗೂಡುಗಳನ್ನು ಬಿಚ್ಚುವುದಕ್ಕೆ ನೂಲಿಗೋಸ್ಕರ ಕಳುಹಿಸುತ್ತಿದ್ದೇವೆ ಎಂದು ಹೇಳಿದ್ದಾರೆ.

ನೂಲಿಗೆ ಕಳುಹಿಸತಕ್ಕಂತಹ ಗೂಡಿನ ಬೆಲೆ ಕೇವಲ 60 ರಿಂದ 70 ರೂಪಾಯಿ ಇರುತ್ತದೆ. ಅದಕ್ಕೆ ಸರ್ಕಾರ 40 ರೂಪಾಯಿ ಬೋನಸ್ ಕೊಡುತ್ತದೆ. ಮಾನ್ಯ ಸಚಿವರು ಕಳೆದ ಮೂರು–ನಾಲ್ಕು ದಿವಸಗಳಲ್ಲಿ ಈ ಅಧಿವೇಶನದಲ್ಲಿ ಒಂದು ಪ್ರಕಟಣೆ ಮಾಡಿದರು. ಇನ್ನು 10 ರೂಪಾಯಿ ಬೋನಸ್ ರೇಷ್ಮೆಗೆ ಜಾಸ್ತಿ ಮಾಡುತ್ತೇವೆಂದು ಹೇಳಿದರು. ಮಾನ್ಯ ಅಧ್ಯಕ್ಷರು ರೇಷ್ಮೆ ಸಚಿವರಾಗಿದ್ದ ಸಂದರ್ಭದಲ್ಲಿಯೂ ಕೂಡ 10 ರೂಪಾಯಿ ಬೋನಸ್ ಜಾಸ್ತಿ ಮಾಡಿರುವುದು ತಮ್ಮ ಗಮನದಲ್ಲಿ ಇದೆ. ಈಗ ಏನು ಬಿತ್ತನೆಗೆ ಹೋಗತಕ್ಕಂತಹ ಗೂಡಿನ 150 ರೂಪಾಯಿ ಬೆಲೆ ನಿಗದಿ ಮಾಡಿದ್ದೀರಿ, ಅದಕ್ಕೆ ಸಮಾನಾಂತರವಾಗಿ

ಬಿತ್ತನೆಗೆ ಯೋಗ್ಯವಾದಂತಹ ಗೂಡು ಬಿಚ್ಚುವುದಕ್ಕೆ ಹೋದರೂ ಕೂಡ ಅವರಿಗೆ ನಷ್ಟ ಆಗದ ರೀತಿಯಲ್ಲಿ ವೈಜ್ಞಾನಿಕವಾಗಿ ಬೆಲೆಯನ್ನು ಸರ್ಕಾರ ನಿಗದಿ ಮಾಡಬೇಕು ಎನ್ನತಕ್ಕಂಥದ್ದನ್ನು ನಾನು ಕೇಳುತ್ತಿದ್ದೇನೆ. ಜೊತೆಗೆ ಒಂದು ಲಕ್ಷ 50,000 ಹೆಕ್ಟೇರ್‌ನಲ್ಲಿ ರೇಷ್ಮೆ ಬೆಳೆ ಬೆಳೆಯುತ್ತಿದ್ದುದು ಇವತ್ತು 90,000ಕ್ಕೆ ಇಳಿದಿದೆ.

ಅಧ್ಯಕ್ಷರು :– ಏನು ಬೇಕು ಎಂದು ಪ್ರಶ್ನೆ ಕೇಳಿ.

ಶ್ರೀ ಹೆಚ್. ನಿಂಗಪ್ಪ :– ಕೇಳುತ್ತಿದ್ದೇನೆ. ಮಾನ್ಯ ಅಧ್ಯಕ್ಷರೆ, ಇದರ ಮೇಲೆ ಮಾತನಾಡುತ್ತಾ ಹೋದರೆ ಇನ್ನು ಒಂದು ಗಂಟೆ ಮಾತನಾಡಬಹುದು. ಆದರೆ ರೇಷ್ಮೆ ಸಚಿವರು ಕೊಟ್ಟಿರುವ ಉತ್ತರ ಏನಿದೆ, ಅರ್ಧ ಸಮಂಜಸವಾಗಿದೆ, ಅರ್ಧ ಸಮಂಜಸವಾಗಿಲ್ಲ ಎಂಬುದು ನನ್ನ ಭಾವನೆ. ಜೊತೆಗೆ ಸರ್ಕಾರವು ಈಗಾಗಲೇ ವಿಶೇಷ ಪ್ಯಾಕೇಜ್ ಒದಗಿಸಿದೆ ಎನ್ನುವ ಮಾತನ್ನು ಹೇಳಿದ್ದಾರೆ. ಯಾವ ಯಾವ ಪ್ಯಾಕೇಜ್‌ನಲ್ಲಿ ಏನೇನು ಅಂಶ ಇದೆ ಎಂದು ವಿವರವಾಗಿ ಉತ್ತರದಲ್ಲಿ ಕೊಟ್ಟಿಲ್ಲ. ಜೊತೆಗೆ ಈ 40 ರೂಪಾಯಿ ಬೋನಸ್ ಏನಿದೆ, ಅದು ಬಹಳ ಕಡಿಮೆ ಆಗಿದೆ. ರೈತರು ಬಿತ್ತನೆ ವಲಯದ ಬೆಳೆಗಾರರಿಗೆ ಪ್ರೋತ್ಸಾಹಿಸಬೇಕಾದರೆ, ಹಿಂದೆ ಕೊಳವೆ ಬಾವಿಗಳನ್ನು ತೆಗೆಸಿ ಅದಕ್ಕೆ ಪಂಪ್‌ಸೆಟ್ ಕೊಡುವ ವ್ಯವಸ್ಥೆ ಇತ್ತು. ಅದನ್ನು ನಿಲ್ಲಿಸಿದ್ದಾರೆ. ಸಾಕಾಣಿಕೆಗೆ ಮನೆಗಳನ್ನು ನಿರ್ಮಿಸುವುದಕ್ಕೆ ಏನು ಪ್ರೋತ್ಸಾಹ ಧನವಾಗಿ 25,000 ಮತ್ತು 50,000 ರೂಪಾಯಿಗಳು ಕೊಡುತ್ತಿದ್ದಾರೆ ಅದು ಬಹಳ ಕಡಿಮೆ. ಜೊತೆಗೆ ಕನಿಷ್ಟ ಒಂದು ಎಕರೆಯಲ್ಲಿ ರೇಷ್ಮೆ ಬೆಳೆ ಬೆಳೆಯಬೇಕು ಎನ್ನತಕ್ಕಂಥದ್ದನ್ನು ನಿಗದಿ ಮಾಡಿದ್ದಾರೆ. ಇವತ್ತು ಯಾವ ರೈತ ಕೂಡ ಒಂದು ಎಕರೆಯಲ್ಲಿ ರೇಷ್ಮೆ ಬೆಳೆ ಬೆಳೆಯುವುದಿಲ್ಲ. ಅರ್ಧ ಎಕರೆಯಲ್ಲಿ ಮಾತ್ರ ರೇಷ್ಮೆ ಬೆಳೆ ಬೆಳೆಯುತ್ತಾರೆ. ಅದರಿಂದಾಗಿ ಆ ಷರತ್ತನ್ನು ಸರಳಗೊಳಿಸಿ.

ಅಧ್ಯಕ್ಷರು: ಪ್ರಶ್ನೆ ಕೇಳಿ, ನಿಂಗಪ್ಪನವರೇ, ಬೇಜಾರು ಮಾಡಿಕೊಳ್ಳಬೇಡಿ, ಬಹಳ ಜನ ಸದಸ್ಯರು ಪ್ರಶ್ನೆ ಪೀಠಿಕೆ ಹಾಕುವುದರಲ್ಲಿಯೇ ಇರುತ್ತಾರೆ. ಆಮೇಲೆ ಉಪ ಪ್ರಶ್ನೆ ಕೇಳಬೇಕು. ಹೀಗಾಗಿ ಒಂದು ಗಂಟೆಗೆ ನಿಗದಿಮಾಡಿದ್ದೇನೆ, ಅಲ್ಲಿಗೆ ನಿಲ್ಲಿಸಿದರೆ ಅನೇಕ ಪ್ರಶ್ನೆಗಳು ಲ್ಯಾಪ್ಸ್ ಆಗುತ್ತವೆ. ನೇರವಾಗಿ ಒಂದು ಪ್ರಶ್ನೆ ಕೇಳಿ.

ಶ್ರೀ ಹೆಚ್. ನಿಂಗಪ್ಪ : – ಮಾನ್ಯ ಅಧ್ಯಕ್ಷರೆ, ಉತ್ತರದಲ್ಲಿ ಹೇಳಿರತಕ್ಕಂಥದ್ದು....

ಅಧ್ಯಕ್ಷರು: ಹೇಳಿದ್ದಾರೆ, ಅದಕ್ಕೆ ಸಂಬಂಧಪಟ್ಟ ಹಾಗೆ ಕ್ಲಾರಿಫಿಕೇಷನ್ ಅನ್ನು ಪಟ ಪಟ ಕೇಳಬೇಕು.

ಶ್ರೀ ಹೆಚ್. ನಿಂಗಪ್ಪ :– ರೈತರಿಗೆ ಅನುಕೂಲ ಆಗುವ ರೀತಿಯಲ್ಲಿ ಏನೇನು ಮಾಡಿದ್ದೇವೆ ಎನ್ನುವುದರ ಬಗ್ಗೆ ಇದರಲ್ಲಿ ಸ್ಪಷ್ಟವಾದ ಉತ್ತರವಿಲ್ಲ ಎನ್ನತಕ್ಕಂತಹ ಮಾತನ್ನು ಮಾನ್ಯ ಸಚಿವರ ಗಮನಕ್ಕೆ ತಂದು ಅಭಿವೃದ್ಧಿಗೆ ಏನೇನು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾಗಿತ್ತು, ಏನೇನು ಮಾಡುತ್ತೀರಿ ಎಂದು ಮಾನ್ಯ ಸಚಿವರಲ್ಲಿ ಪ್ರಶ್ನೆ ಕೇಳುತ್ತೇನೆ.

ಅಧ್ಯಕ್ಷರು:– ಮಾನ್ಯ ಸಚಿವರು, ಬಹಳ ಸಂಕ್ಷಿಪ್ತವಾಗಿ ತಮ್ಮ ಉತ್ತರವನ್ನು ಹೇಳಿ.

ಶ್ರೀ ಸಿ. ಚನ್ನಿಗಪ್ಪ :– ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕ ಸ್ನೇಹಿತರು ಬಹಳ ಉದ್ದವಾದ ಪ್ರಶ್ನೆ ಕೇಳಿದ್ದಾರೆ. ಮಾನ್ಯ ಅಧ್ಯಕ್ಷರೆ, ತಮಗೆ ಇದರ ಬಗ್ಗೆ ಅನುಭವ ಇದೆ. ಬಿತ್ತನೆ ಏರಿಯಾದಲ್ಲಿ ಅನೆಕಲ್, ಕುಣಿಗಲ್ ಮತ್ತು ಮಾಗಡಿ ನೋಟಿಫಿಕೇಷನ್ ಮಾಡಿ ಮೈಸೂರನ್ನು ಉತ್ತಮವಾದ ತಳಿ ಬೆಳೆಯತಕ್ಕಂತಪ ಸಂಸ್ಥೆ ಆಗಿ ಮಾರ್ಪಾಟು ಮಾಡಿದ್ದೇವೆ. ಅದಕ್ಕೆ 3.29 ಲಕ್ಷ ರೂಪಾಯಿ ಪ್ರತಿ ವರ್ಷ ನಾವು ಬೋನಸ್ ಕೊಡುತ್ತಿದ್ದೇವೆ. ಉತ್ತಮವಾದ ಹುಳು ಸಾಕಾಣಿಕೆ ಕೇಂದ್ರಗಳನ್ನು ಮಾಡಿದ್ದೇವೆ. 9 ಜನ ಅಸಿಸ್ಟೆಂಟ್ ಡೈರೆಕ್ಟರ್‌ಗಳನ್ನು ಹಾಕಿದ್ದೇವೆ. ಇಬ್ಬರು ಡೆಪ್ಯುಟಿ ಡೈರೆಕ್ಟರ್‌ಗಳನ್ನು ಡೈರೆಕ್ಟರ್‌ಗಳನ್ನು ಹಾಕಿದ್ದೇವೆ, ಮತ್ತು ರೋಗ ನಿಯಂತ್ರಣಕ್ಕೆ ಕೊಡತಕ್ಕಂತಹ ವಸ್ತುಗಳನ್ನು ಸಿಂಪಡಿಸುವುದು ನಾವೇ ಹೋಗಿ ಕೂತು ಮಾಡುವ ಕೆಲಸವನ್ನು ಇವತ್ತು ಪ್ರತಿಯೊಂದು ಮನೆಯಲ್ಲಿ ಮಾಡುತ್ತಿದ್ದೇವೆ. ಬೆಳೆದಂಥ ಗೂಡಿಗೂ 150 ರೂಪಾಯಿ ರೇಟ್ ಫಿಕ್ಸ್ ಮಾಡಿ ಮಾರುಕಟ್ಟೆಗೆ ಮಾರಾಟ ಮಾಡುತ್ತಿದ್ದೇವೆ. ಬೋನಸ್ ಬಗ್ಗೆ ಮಾನ್ಯ ಶಾಸಕರು ಕಳಕಳಿಯಿಂದ ಕೇಳಿದರು, ತಮ್ಮ ಕಾಲದಲ್ಲಿ ಕೂಡ 40 ರೂಪಾಯಿ ಕೊಟ್ಟಿದ್ದರು. ಮಾನ್ಯ ಧರ್ಮಸಿಂಗ್‌ರವರಲ್ಲಿ ಮತ್ತು ಮಾನ್ಯ ಸಿದ್ಧರಾಮಯ್ಯನವರಲ್ಲಿ ನಾನು ವಿನಂತಿ ಮಾಡಿದೆ, ಸಾವಿರಾರು ಜನ ರೈತರಿಗೆ ತೊಂದರೆಯಾಗಿದೆ ಎಂದು ಹೇಳಿದ್ದರಿಂದ 10 ರೂಪಾಯಿ ಜಾಸ್ತಿ ಮಾಡಿ ಎಂದು ಅವರು ಸೂಚನೆ ಕೊಟ್ಟ ಮೇಲೆ ಕೇಜಿಗೆ 10 ರೂಪಾಯಿ ಜೂನ್‌ನಿಂದ ಜಾರಿಗೆ ಬರುವ ಹಾಗೆ ಜಾಸ್ತಿ ಮಾಡಿದ್ದೇವೆ. ಪ್ರತಿಯೊಂದು ವೈಜ್ಞಾನಿಕ ರೀತಿಯಲ್ಲಿ ಮೊಟ್ಟೆಗಳು ತಯಾರು ಮಾಡುವುದು, ಬೆಳೆ ಬೆಳೆಯತಕ್ಕಂತಹ ವಿಚಾರದಲ್ಲಿ ರೈತರಿಗೆ ಕರೆದು ಟ್ರೈನಿಂಗ್ ಕೊಟ್ಟು ಸೆಪರೇಟಾಗಿ ಕ್ಲಾಸ್ ತೆಗೆದುಕೊಂಡು, ಪ್ರತಿಯೊಂದು ಹಂತದಲ್ಲಿ ಡೆವ್‌ಲಪ್ ಮಾಡುವ ವೈಜ್ಞಾನಿಕ ಪದ್ಧತಿಯನ್ನು ಅಳವಡಿಸಿದ್ದೇವೆ. ಸರ್ಕಾರ ಯಾವುದೇ ಮಟ್ಟದಲ್ಲೂ ರೇಷ್ಮೆ ಇಲಾಖೆ ಹಿಂದಿನಿಂದಲೂ ಹೆಸರು ಪಡೆದುಕೊಂಡಿದ್ದು, ಚೈನ್ ದೇಶಕ್ಕೆ ಕಂಪೇರ್ ಮಾಡಿದರೆ 10,000 ಟನ್ ಮಾತ್ರ ಕಡಿಮೆ ಇದ್ದೇವೆ ನಾವು. ಇಡೀ ಭಾರತ ದೇಶದಲ್ಲಿ 65 ಪರ್ಸೆಂಟ್ ರೇಷ್ಮೆ ನಮ್ಮ ರಾಜ್ಯದಲ್ಲಿ ತಯಾರು ಮಾಡುತ್ತಿದ್ದೇವೆ. ಆ ಕೀರ್ತಿ ನಮ್ಮ ರಾಜ್ಯದ ನಮ್ಮ ಎಲ್ಲಾ ಶಾಸಕರಿಗೆ ಮತ್ತು ರಾಜ್ಯದ ರೈತರಿಗೆ ಸೇರುತ್ತದೆ. ಆದ್ದರಿಂದ ಮಾನ್ಯ ನಿಂಗಪ್ಪನವರು ಕೇಳಿದ ಬೇಡಿಕೆ ಏನಿದೆ ಅವುಗಳನ್ನು ಈ ಸರ್ಕಾರ ಹಂತ ಹಂತವಾಗಿ ಫುಲ್‌ಫಿಲ್ ಮಾಡುತ್ತದೆ.

ಅಧ್ಯಕ್ಷರು :– ಮೂರು ಪ್ರಶ್ನೆಗಳು ಇವೆ. ಇನ್ನು ಐದು ನಿಮಿಷ ಇದೆ. ಉಳಿದ ಪ್ರಶ್ನೆಗಳು ಲ್ಯಾಪ್ಸ್ ಆಗುತ್ತವೆ. ರೇಣುಕಾಚಾರ್ಯರವರು... ದಯಮಾಡಿ ಈ ತರಹ ಒತ್ತಾಯ ಮಾಡಬೇಡಿ.

ಶ್ರೀ ಆರ್. ಅಶೋಕ್ :– ಅಧ್ಯಕ್ಷರೆ, ಮಂತ್ರಿಗಳು...

ಅಧ್ಯಕ್ಷರು :– ಅವರಿಗೆ ಅವರ ಇಲಾಖೆಯಲ್ಲಿ ಏನೇನು ಮಾಡುವುದಕ್ಕೆ ಸಾಧ್ಯ ಇದೆ ಎಲ್ಲವನ್ನೂ ಮಾಡುತ್ತವೆಂದು ಭರವಸೆ ಕೊಟ್ಟಿರುತ್ತಾರೆ. ಭರವಸೆ ಕೊಟ್ಟ ಮೇಲೆ ಮತ್ತೆ ಹಾಗೆ ಮಾಡಿದರೆ ಹೇಗೆ? ಅಶೋಕ್‌ರವರೇ...ದಯಮಾಡಿ ಕುಳಿತುಕೊಳ್ಳಿ. ರೇಣುಕಾಚಾರ್ಯ...

<u>ಹೊನ್ನಾಳಿ ತಾಲ್ಲೂಕಿನಲ್ಲಿ ಸಕ್ಕರೆ ಕಾರ್ಖಾನೆ ಸ್ಥಾಪಿಸುವ ಬಗ್ಗೆ</u> :

255 (3422) ಶ್ರೀ ರೇಣುಕಾಚಾರ್ಯ ಎಂ.ಪಿ. (ಹೊನ್ನಾಳಿ) :– ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಖಾಸಗಿ ಮತ್ತು ಸರ್ಕಾರಿ ಸಕ್ಕರೆ ಕಾರ್ಖಾನೆಗಳು ಎಷ್ಟು (ಅವು ಯಾವುವು);

ಆ) ಯಾವ ಯಾವ ಕಾರ್ಖಾನೆಗಳು ಕಾರ್ಯನಿರ್ವಹಿಸುತ್ತಿವೆ; ಯಾವುವು ಸ್ಥಗಿತಗೊಂಡಿವೆ;

ಇ) ಸ್ಥಗಿತಗೊಳ್ಳಲು ಕಾರಣವೇನು;

ಈ) ಸ್ಥಗಿತಗೊಂಡ ಕಾರ್ಖಾನೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಕಾರ್ಮಿಕರಿಗೆ ಜೀವನ ಭದ್ರತೆ ಒದಗಿಸಲಾಗಿದೆಯೇ;

ಉ) ಕಾರ್ಮಿಕರ ಕುಟುಂಬಗಳ ಜೀವನಕ್ಕಾಗಿ ಸರ್ಕಾರ ಯಾವ ಯಾವ ಕ್ರಮಗಳನ್ನು ಕೈಗೊಂಡಿದೆ;

ಊ) ಹೊನ್ನಾಳಿ ತಾಲ್ಲೂಕಿನಲ್ಲಿ ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸುವ ಉದ್ದೇಶ ಸರ್ಕಾರಕ್ಕಿದೆಯೇ;

ಋ) ಯಾವಾಗ ಸ್ಥಾಪಿಸಲಾಗುವುದು; ಹಾಕಿಕೊಂಡ ಯೋಜನೆಗಳೇನು?